ದೊಡ್ಡದೇನು? ಬಿಸಾಕು ಅತ್ಲಾಗೆ...' ಎಂದು ಅಮ್ಮ ಹೇಳಿದರೂ ಆಶ್ಚರ್ಯ ಇಲ್ಲ. 'ನನ್ನ ಹಣೇಬರ ನಂದು' ಎನ್ನುವ ಧಿಮಾಕಿನ ಮಾತಾಡಿ ಮದುವೆಯಾದವಳು ಯಾವ ಮುಖ ಇಟ್ಟುಕೊಂಡು ಅಮ್ಮನೊಡನೆ ಇಂತಾ ವಿಚಾರ ಹಂಚಿಕೊಳ್ಳುತ್ತಾಳೆ? ಎಷ್ಟೋ ಸಲ ರೋಹಿಣಿಗೇ ಅನಿಸುತ್ತಿತ್ತು, 'ರೋಹಿಣಿ ಅನ್ನುವವಳೊಬ್ಬಳು ತೋಚಿದ್ದು ಗೀಚದಿದ್ದರೆ ಏನಾಗುತ್ತದೆ ಸಾಹಿತ್ಯ ಪ್ರಪಂಚಕ್ಕೆ? ತನ್ನಂತವರು ನೂರು, ಅಲ್ಲಲ್ಲ, ಸಾವಿರ ಸಾವಿರ...'

ಕ್ರಮೇಣ ಭೂತಕಾಲಕ್ಕೆ ಸಂದು ಹೋಯ್ತು ಬರವಣಿಗೆಯ ಭ್ರಮೆ. ಹಂಬಲ.

ನೆನಪಾದಾಗಲೊಮ್ಮೆ ಹೃದಯಕ್ಕೆ ಚೂಪು ಮೊನೆಯ ಆಯುಧದಿಂದ ಚುಚ್ಚಿದಂತಾಗುತ್ತಿದ್ದರೂ ಸಂಸಾರ ನಿರ್ವಹಣೆಯ ಗೋಜಲಿನಲ್ಲಿ ಎಲ್ಲವನ್ನೂ ಮರೆವೆಗೆ ತಳ್ಳಿದಳು ರೋಹಿಣಿ. ಚಂದ್ರುವಿನ ಮಾತಂತಿರಲಿ, ಇವಳನ್ನು ಸಂಸಾರದ ನೊಗಕ್ಕೆ ಬಿಗಿದು ಕಟ್ಟಿ ಹಾಕುವುದರಲ್ಲಿ ಅತ್ತೆಯ ಪಾಲೂ ಕಡಿಮೆ ಏನಿರಲಿಲ್ಲ. ಉಟ್ಟು, ತೊಟ್ಟು ಮೆರೆದಾಡಬೇಕಾದ ಹರೆಯದ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡಿದ್ದ ಅತ್ತೆ ತಮ್ಮ ಅತೃಪ್ತ ಆಸೆಗಳನ್ನೆಲ್ಲಾ ಸೊಸೆಯ ಮೇಲೆ ವರಗಿಸಿದರು. ಅವೆಷ್ಟೊಂದು ಹಬ್ಬ, ಅವೆಷ್ಟೊಂದು ವ್ರತ, ಅವೆಷ್ಟೊಂದು ಪೂಜೆ. ಶ್ರಾವಣದೊಡನೆ ಶುರುವಾಗುವ ಸಾಲು ಸಾಲು ಹಬ್ಬಗಳು. ಸೊಸೆಯ ಕೈಲಿ ಎಲ್ಲಾ ವ್ರತಗಳನ್ನೂ ಮಾಡಿಸಿ ಕಣ್ಣು ತುಂಬಿಕೊಳ್ಳುವ ಸಡಗರ ಅತ್ತೆಗೆ. ಬಲಗೈಯಲ್ಲಿ ಸದಾ ಒಂದಿಲ್ಲೊಂದು ವ್ರತದ ದಾರ ಕಟ್ಟಿಕೊಂಡು, ಅತ್ತೆಯ ತಾಳಕ್ಕೆ ತಕ್ಕಂತೆ ಕುಣಿಯಬೇಕಾದ ಅನಿವಾರ್ಯವೇನಿರಲಿಲ್ಲ. ಹಾಗೆಯೇ ವಿರೋಧಿಸಬೇಕಾದ್ದೂ ಇಲ್ಲವೆಂಬ ಉದಾಸೀನ ಮನೋಭಾವ. ಅತ್ತೆ ಇರುವವರೆಗೆ ನಡೆದುಹೋಯ್ತು ಹೀಗೇ. ಮಗಳು ಸದ್ಗೃಹಿಣಿಯಾಗಿ ಬಾಳುತ್ತಿರುವುದನ್ನು ಕಂಡು ಅಮ್ಮನ ಕಣ್ಣಲ್ಲಿ ಹೊಳಪು, ಸಂತಸ. "ಈ ಸಂಬಂಧ ಬೇಡ ಅಂದಿದ್ರೆ ದಡ್ಡಿ ಆಗ್ತಿದ್ದೆ ನಾನು..." ಅಂದಿದ್ದಳು ಒಮ್ಮೆ. ಮಗಳ ಮನೆಗೆ ಬಂದು ತಿಂಗಳುಗಟ್ಟಲೆ ಇರಬಹುದಾದ ಸ್ವಾತಂತ್ರ್ಯ ಸಿಕ್ಕಿದ ತಾಯಿ ಹೀಗನ್ನದೆ ಇನ್ನೇನು ಹೇಳಿಯಾಳು ಎನ್ನುವುದನ್ನು ಗಂಟಲೊಳಗೆ ಹತ್ತಿಕ್ಕಿಕೊಂಡು, ಅಮ್ಮ ಹೇಳಿದ್ದು ಸತ್ಯ ಎಂದು ತನ್ನನ್ನು ನಂಬಿಸಿಕೊಳ್ಳುವ ಮಟ್ಟಕ್ಕೆ ತಲುಪಿದ್ದಳು ರೋಹಿಣಿ. ಕಳೆದುಕೊಂಡಿದ್ದಕ್ಕಿಂತಾ ಪಡೆದಿದ್ದು ಜಾಸ್ತಿಯಾದರೆ ಕಳೆದುಕೊಂಡಿರುವುದರ ಲೆಕ್ಕಾಚಾರ ಯಾಕೆ ಬೇಕು? ಪತಿಯ ಇಚ್ಛೆಯನ್ನು ಮೀರದಿದ್ದಾಗ ಭಿನ್ನಾಭಿಪ್ರಾಯಕ್ಕೆ ಎಡೆ ಎಲ್ಲಿ? 'ಸಂಸಾರ ಬಂಧನ' ಅನ್ನುವುದು ಮಗಳು ಶಾಂಭವಿ ಹುಟ್ಟಿದ ಮೇಲೆ ಮತ್ತಷ್ಟು ಬಿಗಿಯಾಗಿ ಸುತ್ತಿಕೊಂಡಿತು. ಅವಳ ಬಾಲ್ಯ, ವಿದ್ಯೆ, ಓದು, ಮದುವೆ... ಕಾಲ ಕಳೆದಿದ್ದು ಅದಕ್ಕಷ್ಟೇ ಗೊತ್ತು.

★★★

"ಎಂತ ಅಮ್ಮಾ, ಕಾಪಿ ಕೊಡೂಕೆ ಮರ್ತೇ ಹೋಯ್ತಾ ಅಂತ? ಆಗಿಂದ ನಿಂತು ನಿಂತು ಕಾಲು ಬಚ್ಚಿ ಹೋಯ್ತು..."

ಕುಮುಟಿ ಬಿದ್ದು ವಾಸ್ತವಕ್ಕೆ ಬಂದಳು ರೋಹಿಣಿ. 'ತನ್ನ ಬುದ್ಧಿಗಿಷ್ಟು...' ಎನ್ನುವಂತೆ ಬಲಗೈ ಬೆರಳುಗಳಿಂದ ಕಪಾಲದ ಮೇಲ್ಭಾಗಕ್ಕೆ ತಟ್ಟಿಕೊಂಡಳು. ಗ್ಯಾಸ್ ಸ್ಟೌ ಮೇಲೆ ಬಿಸಿಗಿಟ್ಟ ಕಾಫಿ ಕುದ್ದು ಕೆನೆಗಟ್ಟತೊಡಗಿದೆ. ಇನ್ನೊಂದು ಒಲೆಯ ಮೇಲೆ ಬೆಂದು ಬೆಂದು ಅಕ್ಕಿ ಕರಗಿ ಹೋಗುವಂತಾಗಿ ಮಂದವಾಗಿರುವ ಗಂಜಿ. ನಾಗಿಗೆ ಕಾಫಿ ಕೊಟ್ಟು ಎಚ್ಚರಿಸಿ ಬಂದಳು ರೋಹಿಣಿ,

"ಕುದೀತಿದೆ ಕಾಫಿ. ನಾಲಿಗೆ ಸುಟ್ಕೊಂಡ್ರೆ ನನ್ಮೇಲೆ ಮಾತಿಲ್ಲ. ನಿಧಾನಕ್ಕೆ ಕುಡಿ..."

ಸೀರೆಯ ಸೆರಗಿನಿಂದ ಬಿಸಿ ಲೋಟವನ್ನು ಸುತ್ತಿ ಹಿಡಿದು ಕಾಫಿ ಹೀರಿ, 'ಸಮಾ ಉಂಟು' ಅನ್ನುವಂತೆ ಮುಖದಲ್ಲಿ ತೃಪ್ತಿಯ ಕಳೆ ಹೊಮ್ಮಿಸಿದಳು ನಾಗಿ. ರೋಹಿಣಿ ಒಳಗೆ ಬಂದು ಗಂಜಿಯ ಪಾತ್ರೆಗೆ ಚಮಚದಷ್ಟು ಉಪ್ಪು ಸೇರಿಸಿ ಒಲೆ ಆರಿಸಿ ಮುಚ್ಚಿಟ್ಟಳು. ಎಷ್ಟು ಹೊತ್ತಿಗೆ ಉಂಡರೂ ನಡೆಯುತ್ತದೆ, ಉಣ್ಣದಿದ್ದರೂ. ಬೆಂದು ಹದವಾದ ಗಂಜಿ. ತುಪ್ಪ, ಮಿಡಿ ಉಪ್ಪಿನಕಾಯಿ ಜೊತೆಯಾದರೆ ಯಾವ